ತಾರೀಖು 6ನೇ ಜುಲೈ 1896.

ಸ॥ 1896ನೇ ಇಸವಿ ಜೂ॥ 30ನೇ ಮಂಗ್ಳುಮಿನ ಬೋರ್ಡು ಮೀಟಿಂಗಿನಲ್ಲಿ ಪ್ಯಾಸಾದ ರೆಜೆಲ್ಯೂಷ್ಯನ ಅನುಸರಿಸಿ, ಸಾದೆ ಮತ್ತು ಇದ್ದಲು ವ್ಯಾಪಾರದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ:—

ಸಿಟಿ ಮುಜ್ತ್ರಿನಲ್ಲಿ ಸಾದೆ ಮತ್ತು ಇದ್ದಲು ವ್ಯಾಪಾರದಾರರು ತಮ್ಮ ಅಂಗಡಿಗಳಲ್ಲಿ ಇದರ ಕೆಳಗೆ ಸೈನ್ ಮಾಡಿ ಇರುವವರಿಂದ ಕೊಡಲ್ಪಡುವ "ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ ಎಂಬ" ಛಾಪೆಯುಳ್ಳಂಥಾ ಕ್ರಮವಾದ ತೂಕದ ಕಲ್ಲುಗಳನ್ನ ಉಪಯೋಗಿಸಬೇಕು. ಹಾಗೆ ಛಾಪೆ ಇಲ್ಲದ ತೂಕದ ಕಲ್ಲುಗಳನ್ನ ಉಪಯೋಗಿಸಿದಂಥಾವರನ್ನ ಮೋಸಕೃತ್ಯಕ್ಕೆ ಗುರಿಮಾಡಿ ಲಾ ಅನುಸರಿಸಿ ಕ್ರಮ ನಡಿಸಲ್ಪಡುತ್ತೆ.

2. ಮೇಲೆಕಂಡ ಷರತ್ತುಗಳನ್ನ ಜಾಲತಿ ಇಸವಿ ಜುಲೈ ಗುರ್ತೇ ಲಾಗಾಯತು ಕೊಡಲ್ಪಡುವ ಲೈಸೆನ್ಸುಗಳಲ್ಲಿ ನಮೂದಿಸಲಾಗುತ್ತೆ.

3. ಈ ಸಂಬಂಧವಾದ ವ್ಯಾಪಾರದಾರರೆಲ್ಲರೂ ಬಂದೇ ನಮೂನೆಯಾದ ತೂಕದ ಕಲ್ಲುಗಳನ್ನ ಅಂಗಡಿಗಳಲ್ಲಿ ಉಪಯೋಗಿಸಬೇಕು. ಡಿಪೋ ನಮೂನೆ ಕಲ್ಲುಗಳನ್ನ ಮ್ಯುನಿಸಿಪಲ್ ಕಲೆಕ್ಟರ್ ಆಫಿಸಿನಲ್ಲಿ ನೋಡಬಹುದು. ಲೈಸೆನ್ಸು ತೆಗೆದುಕೊಳ್ಳುವ ವೇಳೆ ಡಿಪೋ ಕಲ್ಲುಗಳನ್ನ ಹಾಜರ್ಮಾಡಬೇಕು. ಅವುಗಳನ್ನ ಅಜವಾಬಿಯಿಷಿಯಿಂದ ಛಾರ್ಜು ಇಲ್ಲದೆ ಛಾಪೆ ಹಾಕಿ ಕೊಡಲ್ಪಡುವದು. ಮ್ಯುನಿಸಿಪಾಲಿಟಿಯಿಂದ ಅಂಥಾ ತೂಕದ ಕಲ್ಲುಗಳನ್ನ ಸರ್ಕಾರ ಆಗಬೇಕೆಂಬ ಇಷ್ಟವುಳ್ಳವರಿಗೆ ಖರೀದಿಗೆ ಕೊಡಿಸಲಾಗುವದು.

ಟಿ. ಟಿ. ಲೆನಾರ್ಡ್,
ಪ್ರಸಿಡೆಂಟ್.

ಕೋಲಾರ್ ಡಿಸ್ಟ್ರಿಕ್ಟು.

ತಾರೀಖು 17ನೇ ಜುಲೈ 1896.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಾಯಂಗುತ್ತಾ ಬಾಕಿದಾರರಾದ ಜಯ್ಯಾಚಾರ್ರಿಂದ ಬರಬೇಕಾದ ಕಾಯಂಗುತ್ತಾ ಬಾಕಿಗಾಗಿ ಇದರಡಿ ನಮೂದಾಗುವ ಫಾರ್‌ಫಿಟ್ಟಾದ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕು ಅವುಲ್‌ದಾರ್ರ ಕಚೇರೀಲಿ 1896ನೇ ಇಸವಿ ಆಗಸ್ಟ್ 29ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1895–96ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಾಯಂಗುತ್ತಾ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 44–13–3 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜ್ ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಪೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟ್ ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ

ಮಾಡಲ್ಪಟ್ಟ ಲಿಖಿತವಾದ ಆಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಆದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕಿದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯವು ಪಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪರ್ಯಂತಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜು ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮ್ಮಿಷನರವರಿಂದ ಸ್ಯೆ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ್ ಅತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯ್ತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು.

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರನ ಹೆಸರು.	ಸ್ವತ್ತಿನ ವಿವರ. ಕಟ್ಟಡಗಳು. ಕಟ್ಟಿಸಿದ ಹೆಸರು.	ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಖಾತಾ ನಿಶಾನಿ ಹೆಸರು.	ಖುಷ್ಕಿ ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಅಂದಾಜು.	ಸ್ವತ್ತಿನ ಮೇಲೆ ಬರಬೇಕಾದ ನೋಟಿಸ್ ಫೀ ಸ್ಟೆರ್ಲಿ ಸಹಿತವಾದ ಬಾಕಿ ಮೊಬಲಗು.
1	2	3	4	5	6	7	8	9	10	11
				ರೂ. ಆ. ಪೈ.				ಎಕರೆ. ಗುಂಟೆ.	ರೂ. ಆ. ಪೈ.	ರೂ. ಆ. ಪೈ.
ಸೋಲೂರು	ಅಪ್ಪಿಹಳ್ಳಿ	ಬೂದನಹಳ್ಳಿ ಕಾಯಂಗುತ್ತಿಗೆ ಗ್ರಾನು	ಜಯ್ಯಾಚಾರಿ, ಅರ್ಧ ಗ್ರಾಮ ಅನುಭವದಾರ	..	.. .. ..	ಅರ್ಧ ಗ್ರಾನು	ಖುಷ್ಕಿ ತರೀ ಬಾಗಾಯತು ಪರಂಪೋಕು	630 1 10 36 37 16 71 13	287 7 7	44 13 3
							ಟೋಟಲ್	749 26		
							ಸಾಲಿಯಾನಾ ಸರ್ತಾರಕ್ಕೆ ಕೊಡಬೇಕಾದ್ದು			ಬಡ್ಡಿ ನೋಟಿಸ್ ಫೀ ಸಹಿತವಾಗಿ ಕೊಡಬೇಕು. 195-9-8

ಸಿ. ಮಾದಯ್ಯ,
ಡೆಪ್ಯೂಟಿ ಕಮ್ಮಿಷನರ್.